ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಸಲೀಂ ಅಹಮದ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 715

ಉತ್ತರಿಸಬೇಕಾದ ದಿನಾಂಕ : 22-02-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ಸಹಕಾರಿ ಇಲಾಖಾ ವ್ಯಾಪ್ತಿಗೆ ಒಳಪಡುವ ವಿವಿಧ ದರ್ಜೆಯ ಸಹಕಾರಿ ಬ್ಯಾಂಕ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಖ್ಯಾ ವಿವರಗಳನ್ನು ಒದಗಿಸುವುದು)	ಸಹಕಾರಿ ಇಲಾಖಾ ವ್ಯಾಪ್ತಿಗೆ ಒಳಪಡುವ ವಿವಿಧ ದರ್ಜೆಯ ಸಹಕಾರಿ ಬ್ಯಾಂಕ್‌ಗಳ ಸಂಖ್ಯೆ 284 ಗಳಿರುತ್ತವೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಆ	ಇಂತಹ ಸಹಕಾರಿ ಬ್ಯಾಂಕ್‌ಗಳು ತಮ್ಮ ಸದಸ್ಯರು/ಖಾತೆದಾರರು/ಸಾಲ ಪಡೆದುಕೊಂಡವರು ಸೇರಿದಂತೆ ವಿವಿಧ ದರ್ಜೆಯ ಖಾತೆದಾರರಿಗೆ ಮೋಸ ಮಾಡಿದ ಮತ್ತು ಬ್ಯಾಂಕ್‌ಗಳನ್ನು ಮುಚ್ಚಿ ಠೇವಣಿದಾರರು ಮತ್ತಿತರ ಖಾತೆದಾರರಿಗೆ ಖಾಯಂ ಆಗಿ ವಂಚಿಸಿರುವ ಎಷ್ಟು ಪ್ರಕರಣಗಳು ಕಳೆದ ಮೂರು ವರ್ಷಗಳಲ್ಲಿ ದಾಖಲಿಸಲ್ಪಟ್ಟಿವೆ; ಅಂಥ ಸಹಕಾರಿ ಬ್ಯಾಂಕ್‌ಗಳ ಮೇಲೆ ಕೈಗೊಂಡ ಕ್ರಮಗಳೇನು;	ಕಳೆದ 03 ವರ್ಷಗಳಲ್ಲಿ 01 ಪ್ರಕರಣದಲ್ಲಿ ಠೇವಣಿದಾರರಿಗೆ ವಂಚಿಸಿರುವುದು ದಾಖಲಿಸಲ್ಪಟ್ಟಿರುತ್ತದೆ. ಬೆಂಗಳೂರು ನಗರದ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಈ ಬ್ಯಾಂಕ್‌ನಲ್ಲಿ ಅವ್ಯವಹಾರ ನಡೆದಿರುತ್ತದೆ. ಈ ಬ್ಯಾಂಕ್ ವಿರುದ್ಧ ಕೈಗೊಂಡ ಕ್ರಮಗಳು ಕೆಳಕಂಡಂತಿರುತ್ತವೆ • ಸಿಐಡಿ ತನಿಖೆಗೆ ಆದೇಶಿಸಲಾಗಿದೆ. • ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರ ವಿಚಾರಣೆಗೆ ಆದೇಶಿಸಲಾಗಿದೆ. • 2014-15 ರಿಂದ 2018-19 ರವರೆಗಿನ ಲೆಕ್ಕಪತ್ರಗಳನ್ನು ಮರುಲೆಕ್ಕಪರಿಶೋಧನೆಗೆ ಆದೇಶಿಸಲಾಗಿದೆ. • ಜಾರಿ ನಿರ್ದೇಶನಾಲಯ ಸ್ಥಿರಾಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿರುತ್ತದೆ. • ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ. ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ
ಇ	ಸಹಕಾರಿ ಕಾನೂನು ಕಟ್ಟಳೆಗಳಲ್ಲಿ ಖಾತೆದಾರರ ಹಣಕ್ಕೆ ಖಾತರಿ ಒದಗಿಸಿಕೊಡುವ ಯಾವ ಯಾವ ಕಾನೂನುಗಳು ಜಾರಿಯಲ್ಲಿವೆ; ಪ್ರಸ್ತುತ ಇರುವ ಕಾನೂನು ನಿಯಮಗಳನ್ನು ಗಾಳಿಗೆ ತೂರಿ ಖಾತೆದಾರರಿಗೆ ವಂಚಿಸುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳೇನು?	ಸಹಕಾರಿ ಕಾನೂನು ಕಟ್ಟಳೆಗಳಲ್ಲಿ ಖಾತೆದಾರರ ಹಣಕ್ಕೆ ಖಾತರಿ ಒದಗಿಸುವ ಸಲುವಾಗಿ ಈ ಕೆಳಕಂಡ ನಿಯಮಾವಳಿಗಳನ್ನು ಪಾಲಿಸಲಾಗುತ್ತಿದೆ. 1. DEPOSIT INSURANCE AND CREDIT GUARRANTEE CORPORATION ಅಡಿ ಗ್ರಾಹಕರ ಠೇವಣಿಗೆ ಗರಿಷ್ಟ ರೂ.5.00 ಲಕ್ಷ ಠೇವಣಿಗಳವರೆಗೆ ವಿಮಾ ಖಾತ್ರಿ ಸೌಲಭ್ಯ ಇರುತ್ತದೆ. ಸದರಿ ವಿಮೆಗೆ ಬ್ಯಾಂಕಿನಿಂದ ವಿಮಾ ಪ್ರೀಮಿಯಂ ಪಾವತಿಸಲಾಗುತ್ತಿದೆ.

		2. ರಿಸರ್ವ್ ಬ್ಯಾಂಕ್ ನಿಯಮಗಳು ಹಾಗೂ ಬಿ.ಆರ್ ಆಕ್ಟ್ 1949 ರ ಸೆಕ್ಷನ್ 18 ಹಾಗೂ 24 ರನ್ವಯ ಬ್ಯಾಂಕಿನಿಂದ ಶೇ.18 ಮತ್ತು ಶೇ.4 ರಷ್ಟನ್ನು ಕ್ರಮವಾಗಿ ಎಸ್.ಎಲ್.ಅರ್ & ಸಿ.ಆರ್.ಆರ್ ನಿಯಮ ಪಾಲಿಸುತ್ತಿದ್ದು, ಎಸ್.ಎಲ್.ಆರ್ ಮೊತ್ತವನ್ನು ಸರ್ಕಾರಿ ಭದ್ರತಾ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗುತ್ತಿದೆ. 3. ಬ್ಯಾಂಕಿನ ಸಾಲ ನೀಡಿಕೆ, ವಿನಿಯೋಗ ಎಲ್ಲಾ ವ್ಯವಹಾರವನ್ನು ಕೂಡ ಬ್ಯಾಂಕಿನ ಅನುಮೋದಿತ ನಿಯಮಾವಳಿ, ಬ್ಯಾಂಕಿಂಗ್ ರೆಗ್ಯೂಲೇಷನ್ ಕಾಯ್ದೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕಾರ ನಡೆಸಲಾಗುತ್ತಿದೆ. ಬ್ಯಾಂಕಿನ ಲೆಕ್ಕ ಪತ್ರಗಳ ಬಗ್ಗೆ ಕಾಲಕಾಲಕ್ಕೆ ಶಾಸನಬದ್ಧ ಲೆಕ್ಕಪರಿಶೋಧನೆ, ಸಮವರ್ತಿ ಲೆಕ್ಕ ಪರಿಶೋಧನೆ, ನಬಾರ್ಡ್‌ನಿಂದ ಪರಿವೀಕ್ಷಣೆ, ಆರ್.ಬಿ.ಐ, ಅಪೆಕ್ಸ್ ಬ್ಯಾಂಕಿನಿಂದ ಪರಿವೀಕ್ಷಣೆ ನಡೆಸಲಾಗುತ್ತಿದೆ.

ಸಂಖ್ಯೆ ಸಿಒ 12 ಸಿಆರ್‌ಸಿ 2022

(ಸಹಿ)

(ಎಸ್. ಟಿ. ಸೋಮಶೇಖರ್)

ಸಹಕಾರ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 715 ಕ್ಕೆ ಅನುಬಂಧ

ಕ್ರ. ಸಂ.	ಜಿಲ್ಲೆಯ ಹೆಸರು	ಪಟ್ಟಣ ಸಹಕಾರ ಬ್ಯಾಂಕುಗಳು (ಸೌಹಾರ್ದ ಬ್ಯಾಂಕುಗಳ ಸೇರಿ)	ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್
1	ಬೆಂಗಳೂರು	47	ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ + ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು =2
2	ಬೆಂಗಳೂರು ಗ್ರಾಮಾಂತರ	2	0
3	ರಾಮನಗರ	2	0
4	ತುಮಕೂರು	12	1
5	ಚಿತ್ರದುರ್ಗ	3	1
6	ಕೋಲಾರ	0	1
7	ಚಿಕ್ಕಬಳ್ಳಾಪುರ	0	0
8	ಶಿವಮೊಗ್ಗ	8	1
9	ದಾವಣಗೆರೆ	12	1
10	ಮೈಸೂರು	10	1
11	ಮಂಡ್ಯ	3	1
12	ಹಾಸನ	5	1
13	ಕೊಡಗು	3	1
14	ದಕ್ಷಿಣ ಕನ್ನಡ	8	1
15	ಚಿಕ್ಕಮಗಳೂರು	3	1
16	ಚಾಮರಾಜನಗರ	1	0
17	ಉಡುಪಿ	7	0
18	ಬೆಳಗಾವಿ	40	1
19	ವಿಜಯಪುರ	17	1
20	ಧಾರವಾಡ	11	1
21	ಉತ್ತರ ಕನ್ನಡ	9	1
22	ಹಾವೇರಿ	9	0

23	ಗದಗ	7	0
24	ಬಾಗಲಕೋಟೆ	13	1
25	ಕಲಬುರಗಿ	8	1
26	ರಾಯಚೂರು	3	1
27	ಬೀದರ್	5	1
28	ಬಳ್ಳಾರಿ	7	1
29	ಕೊಪ್ಪಳ	7	0
30	ಯಾದಗಿರಿ	0	0
	ಒಟ್ಟು	262	22

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)